

# ಐಶ್ವರ್ಯದ ಆಸೆ

ಮಣಿಗೆ ಪ್ರಾಣಿಗಳೆಂದರೆ ತುಂಬಾ ಪ್ರೀತಿ, ಬೀದಿಯಲ್ಲಿನ ಬೆಕ್ಕು, ನಾಯಿಗಳಿಗೆ ಆಗಾಗ್ಗೆ ತಿಂಡಿ, ಬಿಸ್ಕತ್ತು, ಹಾಲು ಕೊಡುತ್ತಿದ್ದಳು. ಅವಳ ಮನಸ್ಸು ತುಂಬಾ ಒಳ್ಳೆಯದಿತ್ತು. ಅವಳು ಒಬ್ಬಳೆ ಮಗಳಾಗಿದ್ದು ಅವಳ ಹೆತ್ತವರು ಕೂಲಿ ಕೆಲಸ ಮಾಡುತ್ತಿದ್ದರು. ಅವರು ವಾಸವಾಗಿದ್ದು ಸಣ್ಣ ಹಳ್ಳಿಯಲ್ಲಿ. ಅವರ ಮನೆ ಕಾಡಿಗೆ ಅತಿ ಸಮೀಪದಲ್ಲಿತ್ತು. ಸುತ್ತಮುತ್ತ ಗಿಡಮರಗಳು ಇತ್ತು, ಆಗಾಗ್ಗೆ ಚಿರತೆ, ಆನೆ, ಜಿಂಕೆ, ಹಾವು, ನರಿ, ಮೊಲ ಮೊದಲಾದ ಪ್ರಾಣಿಗಳು ಇವರ ಮನೆ ಸುತ್ತ ಸುಳಿದಾಡುತ್ತಿದ್ದವು. ಇವರಿಗೆ ಅವುಗಳಿಂದೇನೂ ತೊಂದರೆಯಾಗಿರಲಿಲ್ಲ. ಮಣಿ ಎಲ್ಲವನ್ನೂ ಕುತೂಹಲದಿಂದ ನೋಡಿ ಖುಷಿ ಪಡುತ್ತಿದ್ದಳು.

ಒಮ್ಮೆ ಇವರ ಮನೆ ಗೇಟಿನ ಬಳಿ ನವಿಲೊಂದು ದಾರಿ ತಪ್ಪಿ ಬಂದಿತ್ತು, ಅದರ ಕಾಲಿಗೆ ದೊಡ್ಡ ಮುಳ್ಳು ಚುಚ್ಚಿತ್ತು. ಮಣಿ ನವಿಲನ್ನು ನೋಡಿ ಹತ್ತಿರ ಹೋಗಿ ಪ್ರೀತಿಯಿಂದ ಸವರುತ್ತಾ ಅದರ ಕಾಲಿಗೆ ಚುಚ್ಚಿದ್ದ ದೊಡ್ಡ ಮುಳ್ಳು ಕಂಡು ಮರುಕಪಟ್ಟಳು. ಅದು ನೋವಿನಿಂದ ವಿಚಿತ್ರ ಧ್ವನಿ ಹೊರಡಿಸುತ್ತಿತ್ತು. ಮಣಿ ಉಪಾಯವಾಗಿ ಅದರ ಕಾಲನ್ನು ಮೆಲ್ಲನೆ ಹಿಡಿದಳು. ಅದು ಮೊದಲು ಗಾಬರಿಗೊಂಡರೂ ನಂತರ ಮಣಿಯ ಹಿತಸ್ಪರ್ಶಕ್ಕೆ ಸಮಾಧಾನಗೊಂಡು ಸುಮ್ಮನಾಯಿತು. ಮಣಿ ಮೆಲ್ಲನೆ ಆ ಮುಳ್ಳನ್ನು ತನ್ನ ಉಗುರಿನಿಂದ ತೆಗೆದಳು. ನಂತರ ಒಳಹೋಗಿ ಕೊಬ್ಬರಿಎಣ್ಣೆ ತಂದು ಅದರ ಕಾಲಿಗೆ ಮೃದುವಾಗಿ ಹಚ್ಚಿದಾಗ ನವಿಲಿಗೆ ನೋವು ಕಡಿಮೆಯಾಗಿತ್ತು. ಅದು ಮಣಿಯತ್ತ ಕೃತಜ್ಞತೆಯಿಂದ ನೋಡಿ ನಿಧಾನಕ್ಕೆ ಹೊರಟುಹೋಯಿತು.

ಮರುದಿನ ಅದೇ ಸಮಯಕ್ಕೆ ಅದೇ ನವಿಲು ಮಣಿಯ ಬಳಿ ಬಂದು ತನ್ನ ಬಾಯಿಂದ ಒಂದು ವಜ್ರದ ಹರಳನ್ನು ತೆಗೆದು ಅವಳ ಕೈಗಿಟ್ಟು ಹೊರಟುಹೋಯಿತು. ಮಣಿಗೆ ಅಚ್ಚರಿಯಾಯಿತು. ಅದು ಫಳಫಳ ಹೊಳೆಯುತ್ತಿತ್ತು ಸಂಜೆ ಬಂದ ಅಪ್ಪ ಅಮ್ಮನಿಗೆ ಅದನ್ನು ಕೊಟ್ಟು ಎಲ್ಲಾ ವಿಷಯ ಹೇಳಿದಾಗ, ಅವರಿಗೆ ಅದು ವಜ್ರವೆಂದು ಗೊತ್ತಾಗಿ ಖುಷಿಯಾಯಿತು. ಮರುದಿನ ಅವರು ಅದನ್ನು ಪೇಟೆಗೆ ಹೋಗಿ ಮಾರಿದರು. ತುಂಬಾ ಹಣ ಸಿಕ್ಕಿತು. ಒಮ್ಮೆಲೇ ಅವರಿಗೆ ಸಿರಿತನ ಸಿಕ್ಕಿತ್ತು.

ಮುಂದಿನ ವಾರವೂ ನವಿಲು ಬಂದು ಮಣಿಯ ಕೈಗೆ ಇನ್ನೊಂದು ವಜ್ರವನ್ನು ಬಾಯಿಂದ ಉಗಿಯಿತು. ಮಣಿ ಅದನ್ನು ಮುದ್ದುಮಾಡಿ ಕಾಳು ತಿನ್ನಿಸಿ ಕಳಿಸಿಕೊಟ್ಟು ಅಪ್ಪನ ಕೈಗೆ ವಜ್ರವನ್ನು ಕೊಟ್ಟಳು. ಅವರಿಗೆ ಸಂತೋಷವಾಯಿತು. ಅದನ್ನೂ ಮಾರಿದರು. ತುಂಬಾ ಹಣ ಸಿಕ್ಕಿತು. ಮನೆ ಕೊಂಡರು. ಬೇಕಾದ್ದನ್ನೆಲ್ಲಾ ಕೊಂಡರು. ಮುಂದಿನವಾರವೂ ನವಿಲು ಬಂದು ತನ್ನ ಬಾಯಿಂದ ವಜ್ರವನ್ನು ಇವಳ ಕೈಗೆ ಉಗಿದು